ಈಗ ಉಪಯೋಗಿಸಲಾಗುತ್ತಿದೆಯೇ? ಎಂದು ಪ್ರಶ್ನೆ ಕೇಳಿದ್ದಕ್ಕೆ ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿ ಕೆಲಸ ಮುಗಿಯದೆ ಇರುವುದರಿಂದ ಡಯಾಲಿಸಿಸ್ ಉಪಕರಣಗಳನ್ನು ಉಪಯೋಗಿಸುತ್ತಿಲ್ಲ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಬಿಲ್ಡಿಂಗನ್ನು ಯಾವಾಗ ಪೂರ್ಣ ಮಾಡುತ್ತೀರಿ? ಅದನ್ನೂ ಕೂಡಾ ಹೇಳಬೇಕು ಬಿಲ್ಡಿಂಗ್ ಬಗ್ಗೆ ಲೋಕೋಪಯೋಗಿ ಇಲಾಖೆಯ ಮೇಲೆ ಆಪಾದನೆ ಮಾಡಿದ್ದೀರಿ. ಲೋಕೋಪಯೋಗಿ ಇಲಾಖೆಯಿಂದ ಬಿಲ್ಡಿಂಗ್ ಯಾವಾಗ ಆಗುತ್ತದೆ ?

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಉಪಾಧ್ಯಕ್ಷಿಣಿಯವರೇ, ಡಯಾಲಿಸಿಸ್ ಉಪಕರಣವನ್ನು ಇನ್ನೂ ಇನ್‌ಸ್ಟಾಲ್ ಮಾಡಿಲ್ಲ ಅದನ್ನು ಇನ್‌ಸ್ಟಾಲ್ ಮಾಡುವುದಕ್ಕೆ ಎ. ಸಿ ರೂಮ್ ಬೇಕಾಗುತ್ತದೆ. ಪಿ. ಡಬ್ಲೂ. ಡಿ.ಯವರು ಇನ್ನೂ ಇದರ ಕೆಲಸವನ್ನು ಮುಗಿಸಿಲ್ಲ. ಪಿ.ಡಬ್ಲ್ಯೂ.ಡಿ.ಯವರು ಕೆಲಸವನ್ನು ಮುಗಿಸಿದ ಮೇಲೆ ಇನ್‌ಸ್ಟಾಲ್ ಮಾಡುತ್ತೇವೆ. ಡಯಾಲಿಸಿಸ್ ಉಪಕರಣವನ್ನು ಇನ್‌ಸ್ಟಾಲ್ ಮಾಡುವುದಕ್ಕೆ ಎ.ಸಿ. ರೂಮ್ ಆಗಬೇಕು.

ಶ್ರೀ ರಾಮಲಿಂಗರೆಡ್ಡಿ.—ಯಾವಾಗ ಮಾಡುತ್ತೀರಿ ?

ಶ್ರೀಮತಿ ಮನೋರಮಾ ಮಧ್ವರಾಜ್.—ಆದಷ್ಟು ಬೇಗ ಮಾಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ತಮ್ಮ ಅಧಿಕಾರಾವಧಿ ಇರುವಷ್ಟರಲ್ಲೇ ಮಾಡುತ್ತೀರಾ ?

(ಗೊಂದಲ)

ಶ್ರೀ ಎಂ. ಮಹದೇವ್.—ನಾವು ಐದು ವರ್ಷದೊಳಗೆ ಕಂಪ್ಲೀಟ್ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ನಿನ್ನೆ ನಡೆದ ಪ್ರಕರಣ ನೋಡಿದರೆ ನೀವು ಆರು ತಿಂಗಳೂ ಇರುವುದಿಲ್ಲ. ಐದು ವರ್ಷ ಇರುತ್ತೇವೆ ಎಂದು ಹೇಳುತ್ತೀರಲ್ಲಾ ?

(ಗೊಂದಲ)

ಶ್ರೀ ರಾಮಲಿಂಗರೆಡ್ಡಿ.—ಕಿದ್ವಾಯಿ ಮೆಮೊರಿಯಲ್ ಇನ್‌ಸ್ಟಿಟ್ಯೂಟ್‌ನಲ್ಲಿಯೂ ಸ್ಕ್ಯಾನಿಂಗ್ ಉಪಕರಣ ಕೆಟ್ಟು ಹೋಗಿದೆ. ಆದರಿಂದಲೂ ಕೂಡಾ ಎಷ್ಟೋ ರೋಗಿಗಳು ವಂಚಿತರಾಗಿದ್ದಾರೆ. ಬಡವರು ಹೊರಗಡೆ ಹೋಗಿ ತೋರಿಸಬೇಕು ಎಂದು ಹೇಳಿದರೆ ಒಂದು ಸಾವಿರ ರೂಪಾಯಿ ಖರ್ಚಾಗುತ್ತದೆ. ಈ ಸ್ಕ್ಯಾನಿಂಗ್ ಉಪಕರಣವನ್ನು ಯಾವಾಗ ರಿಪೇರಿ ಮಾಡುತ್ತೀರಿ ? ಆದಷ್ಟು ಬೇಗ ಮಾಡುತ್ತೇವೆ ಎಂದು ಹೇಳಿದರೆ ಅರ್ಥವೇನು ಬಡವರಿಗೆ ಅನುಕೂಲ ಮಾಡಿಕೊಡಬೇಕೆಂಬ ಮನಸ್ಸು ಸರ್ಕಾರಕ್ಕೆ ಇಲ್ಲವೆ ?

ಉಪಾಧ್ಯಕ್ಷರು. ತಾವು ಏನಾದರೂ ಹೇಳುವುದು ಇದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್.—ಆದಷ್ಟು ಬೇಗ ಮಾಡಿಕೊಡುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ರಾಮಲಿಂಗರೆಡ್ಡಿ.—ಈ ಉಪಕರಣ ಕೆಟ್ಟು ಹೋಗಿ ನಾಲ್ಕು ವರ್ಷವಾಗಿದೆ. ಎಂಭತ್ತು ಲಕ್ಷ ರೂಪಾಯಿಗಳನ್ನು ಕೊಟ್ಟು ಈ ಉಪಕರಣಗಳನ್ನು ಕೊಂಡುಕೊಂಡಿದ್ದೀರಿ. ಹಾಗಾದರೆ ಎಂಭತ್ತು ಲಕ್ಷ ರೂಪಾಯಿ ನಷ್ಟವಾದ ಹಾಗೆ ಆಗಲಿಲ್ಲವೇ?

ಶ್ರೀಮತಿ ಮನೋರಮಾ ಮಧ್ವರಾಜ್.—ಈ ಉಪಕರಣಗಳೇನೂ ಹಾಳಾಗಿ ಹೋಗಿಲ್ಲ. ರಿಪೇರಿಗೆ ಬೇಕಾದ ಸಲಕರಣೆಗಳು ಇಲ್ಲದೇ ಇರುವುದರಿಂದ ಕೆಟ್ಟಿದೆ.

## ಸರಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ಬಗ್ಗೆ ಉದಾಸೀನ

೩೨೬. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಜನಸಾಮಾನ್ಯನಿಗೆ ಆಗುತ್ತಿರುವ ತೊಂದರೆಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ವೈದ್ಯರು ಕಿರಿಯರಿದ್ದು ಹಿರಿಯ ರೋಗಿಗಳ ಬಗ್ಗೆ ತಾತ್ಸಾರ ತೋರುತ್ತಿದ್ದಾರೆಂಬ ಆರೋಪಗಳಿರುವುದು ನಿಜವೇ ?

ಇ) ವೈದ್ಯರು ಕಾದಿರುವ ರೋಗಿಗಳನ್ನು ಗಣನೆಗೆ ತೆಗೆದುಕೊಳ್ಳದೆ ತಮಗೆ ಬೇಕಾದವರನ್ನು ಮಾತ್ರ ನೋಡುತ್ತಾರೆಂಬ ದೂರುಗಳಿರುವುದು ನಿಜವೇ ?

ಈ) ಜನಸಾಮಾನ್ಯನಿಗೆ ಸರಿಯಾಗಿ ಚಿಕಿತ್ಸೆ ಸೌಲಭ್ಯ ಲಭಿಸುವಂತೆ ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಇಲ್ಲ.

ಈ) ಹೌದು.

ಶ್ರೀ ಡಿ. ಬಿ. ಚಂದ್ರೇಗೌಡ —ಮಾನ್ಯ ಉಪಾಧ್ಯಕ್ಷಣಿಯಂವರೇ, ಈ ಪ್ರಶ್ನೆ ಬಗ್ಗೆ ಉಪ ಪ್ರಶ್ನೆ ಕೇಳುವುದಕ್ಕೆ ಮುಂಚೆ ತಮ್ಮ ಗಮನಕ್ಕೆ ತರುವುದೇನೆಂದರೆ, ಇಲ್ಲಿ ಪ್ರಿಂಟ್ ಮಿಸ್ಟೇಕ್ ಆಗಿದೆ. ಇಲ್ಲಿ ವೈದ್ಯರುಗಳು ಕಿರಿಯಂರಿದ್ದು ಹಿರಿಯ ರೋಗಿಗಳ ಬಗ್ಗೆ ತಾತ್ಸಾರ ತೋರುತ್ತಿದ್ದಾರೆಂಬ ಆರೋಪ ಗಳಿರುವುದು ನಿಜವೇ ? ಎಂದು ಪ್ರಶ್ನೆ ಇಲ್ಲಿ ತಪ್ಪಾಗಿದೆ. ಇಲ್ಲಿ ಹಿರಿಯ ರೋಗಿಗಳು ಕಿರಿಯ ರೋಗಿಗಳು ಎಂದು ರೋಗಿಗಳಲ್ಲಿ ಇರುವುದಿಲ್ಲ. ಆದರೆ ವೈದ್ಯರುಗಳಲ್ಲಿ ಹಿರಿಯರು ಕಿರಿಯರು ಎಂದು ಇರುತ್ತಾರೆ. ಇದನ್ನು ಸರಿಪಡಿಸಿ ಉತ್ತರವನ್ನು ಹೇಳಬೇಕು.

ಉಪಾಧ್ಯಕ್ಷರು.—ಇದನ್ನು ಹೆಲ್ಪ್ ಓವರ್ ಮಾಡೋಣವೇ ?

ಶ್ರೀಮತಿ ಮನೋರಮಾ ಮಧ್ವರಾಜ್.—ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿ.

ಪ್ರಶ್ನೆ ಸಂಖ್ಯೆ ೫೦ (೩೨೪) (ಸದಸ್ಯರು ಗೈರುಹಾಜರಾಗಿದ್ದರು)

## ಆರೋಗ್ಯ ಇಲಾಖೆಯಂವರಿಂದ ವಿಡಿಯೋ ಎಂಡೋಸ್ಕೋಪ್ ಉಪಕರಣಗಳ ಖರೀದಿ

೨೫೬. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆರೋಗ್ಯ ಇಲಾಖೆಯು ವಿಡಿಯೋ ಎಂಡೋಸ್ಕೋಪ್ ಉಪಕರಣಗಳನ್ನು ಮುಖ್ಯ ಆಸ್ಪತ್ರೆಗಳ ಉಪಯೋಗಕ್ಕೆ ಖರೀದಿಸಿದೆಯೇ ?

ಆ) ಹಾಗಾದರೆ ಯಾವಾಗ ಖರೀದಿಸಿದರು ಮತ್ತು ಎಷ್ಟು ಉಪಕರಣಗಳನ್ನು ಖರೀದಿಸಿದರು ?

ಇ) ಒಂದು ಉಪಕರಣದ ಬೆಲೆ ಎಷ್ಟು ?

ಈ) ಈ ಉಪಕರಣಗಳನ್ನು ಯಾವ ಆಸ್ಪತ್ರೆಗಳಿಗೆ ಒದಗಿಸಲಾಗಿದೆ ?

ಉ) ಯಾವ ಆಸ್ಪತ್ರೆಯಲ್ಲಿ ಈ ಉಪಕರಣ ಉಪಯೋಗಿಸುತ್ತಿಲ್ಲ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಹೌದು.

ಆ) ಮಾರ್ಚಿ ... ಏಪ್ರಿಲ್ ೧೯೮೯ — ೧೦

ಮಾರ್ಚಿ ... ಏಪ್ರಿಲ್ ೧೯೯೦ — ೧

ಇ) ಒಂದು ಉಪಕರಣದ ಬೆಲೆ ೧೬,೯೨೦, ೬೪೦ ಜಪಾನ್ ಯೆನ್ಸ್ ಭಾರತದ ರೂ. ೧೪,೭೨,೦೪೫-೦೦ (ಇದು ವಿದೇಶಿ ವಿನಿಮಯದ ವಿರಳತೆಗಳಿಗೆ ಒಳಪಟ್ಟಿದೆ)

ಈ) ೧ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಬೆಂಗಳೂರು,

೨ ಮೆಡಿಕಲ್ ಕಾಲೇಜ್ ಆಸ್ಪತ್ರೆ, ಬಳ್ಳಾರಿ,

೩ ವೆನ್‌ಲಾಕ್ ಆಸ್ಪತ್ರೆ, ಮಂಗಳೂರು,

೪ ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿ,